ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧,೭೬,೮೦,೮೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೪೯,೫೪,೦೨,೦೨೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು ".

ಅಧ್ಯಕ್ಷರು.—ಚರ್ಚೆಯನ್ನು ನಾಳೆಗೆ ಮುಂದೂಡೋಣ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರಿಗೂ ಸ್ವಲ್ಪ ರೆಸ್ಟ್ ಸಿಗುತ್ತದೆ, ನಾಳೆ ಚರ್ಚೆ ಮುಂದುವರಿಯಲಿ.

ಅಧ್ಯಕ್ಷರು.—ನಾಳೆ ಒಂಬತ್ತು ಗಂಟೆಗೆ ಉತ್ತರ ಕೊಡಿಸೋಣವೋ ಅಥವಾ ಹತ್ತು ಗಂಟೆಗೆ ಕೊಡಿಸೋಣವೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ಬೆಳಿಗ್ಗೆ ಪಾರ್ಟಿ ಮೀಟಿಂಗ್ ಇದೆ, ೧೧ ಗಂಟೆಗೆ ಚರ್ಚೆ ಮುಂದುವರಿಯಲಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ನಂ. ೫೫೨ (೧೮೫೯)ಕ್ಕೆ ಸಮಯ ಕೇಳಿದ್ದಾರೆ, ಅದನ್ನು ಮುಂದಕ್ಕೆ ಹಾಕಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಸದಸ್ಯರು ನಿವೇಶನ ದುರುಪಯೋಗ ಮಾಡಿದ ಬಗ್ಗೆ.

೨೦೧೮. ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ).—ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಖಾಲಿ ನಿವೇಶನ ಪಡೆದು ಅಕ್ರಮವಾಗಿ ಕಟ್ಟಡಗಳನ್ನು ಕಟ್ಟಿಸಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅಪರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎ. ಉಪ್ಪಿನ್.—ಮಾನ್ಯ ಅಧ್ಯಕ್ಷರೇ, ಸಚಿವರ ಉತ್ತರವನ್ನು ಕೇಳಿ ಆಳುವ ಪಕ್ಷದ ಸದಸ್ಯನಾದ ನನಗೂ ನಾಚಿಕೆ ಆಗಿ ತಲೆ ತಗ್ಗಿಸುವಂತೆ ಆಗಿದೆ. ಇಂತಹ ಹಾರಿಕೆ ಉತ್ತರವನ್ನು ಕೇಳಿ, ಕೇಳಿ, ನಾನಂ ಪ್ರಶ್ನೆಯನ್ನ ಕೇಳುವುದೇ ಬೇಡ ಎಂದು ಸುಮ್ಮನೆ ಆಗಿದ್ದೆ. ಆದರೆ ತಾವು ನನಗೆ ಪತ್ರ ಬರೆದು ಪ್ರಶ್ನೆಗಳನ್ನು ಕೇಳಿರಿ ಎಂದು ಸಮಾಜದಲ್ಲಿ ಆಗತಕ್ಕ ಹುಳುಕುಗಳನ್ನು ಎತ್ತಿ ತೋರಿಸುವುದಕ್ಕೆ ಪ್ರಶ್ನೆಗಳನ್ನು ಕೇಳಿ ಎಂದು ಕರ್ತವ್ಯಗಳ ಬಗ್ಗೆ ತಾವು ಜ್ಞಾಪಕ ಮಾಡಿಕೊಟ್ಟಿದ್ದೀರಿ. ನಾವು ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಹಾರಿಕೆ ಉತ್ತರವನ್ನು ಕೊಡುತ್ತಾರೆ ಸುಮಾರು ೧೪ ಜನ ಕಾರ್ಪೊರೇಟರ್

ಗಳು ಜಮೀನುಗಳನ್ನು ಎರಡು ನೂರು, ಮುನ್ನೂರು ರೂಪಾಯಿಗಳಿಗೆ ತೆಗೆದುಕೊಂಡು ಕಟ್ಟಡ ಗಳನ್ನು ಕಟ್ಟಿಸಿ ಎರಡು ವರ್ಷ, ಮೂರು ವರ್ಷ ಹೀಗೆ ಬಾಡಿಗೆಗೆ ಕೊಟ್ಟು ಅಲ್ಲಿ ಆರ್‌ಸಿಸಿ ಬಿಲ್ಡಿಂಗ್ ಗಳನ್ನು ಕಟ್ಟಿದ್ದಾರೆ. ಇದರ ಬಗ್ಗೆ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಯಾವ ಯಾವ ಕಾರ್ಪೊರೇಟರ್ ಗಳು ಎಷ್ಟೆಷ್ಟು ಕೊಟ್ಟಿದ್ದಾರೆ ಎಂದು ನನ್ನ ಹತ್ತಿರ ವಿವರ ಇದೆ. ಇದರ ಬಗ್ಗೆ ಕೇಳಿದರೆ ಹಾರಿಕೆ ಉತ್ತರ ಕೊಡುತ್ತಾರೆ. ಈ ಬಗ್ಗೆ ಅನೇಕ ಜನರಿಗೆ ಕೂಡ ನನಗೆ ಫೋನ್ ಬಂದಿದೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆಯನ್ನು ಕೇಳುವಾಗ ವಿನಂ ಬೇಕೂ ಎಂದು ಕೇಳಬೇಕು. ಅವರು ಪ್ರಶ್ನೆ ಕೇಳಿದ ಪ್ರಕಾರ ಉತ್ತರ ಹೇಳಿದೆ. ಅಲ್ಲಿ ಹಲವರು ಮನೆಗಳನ್ನು ಕಟ್ಟಿ, ನಿವೇಶನಗಳನ್ನು ತೆಗೆದುಕೊಂಡು ಹಣ ಮಾಡಿದ್ದಾರೆ ಇವೆಲ್ಲ ನನಗೆ ಬಂದಿರುವ ಮಾಹಿತಿ ಪ್ರಕಾರ ಯಾವುದೂ ಕಾರ್ಪೊರೇಟರ್ ಹೆಸರಿನಲ್ಲಿ ಇಲ್ಲ. ಅವರು ಈ ಬಗ್ಗೆ ತಮ್ಮಲ್ಲಿರುವ ವಿವರಗಳನ್ನು ಕೊಟ್ಟರೆ ಅವುಗಳನ್ನು ಪರಿಶೀಲನೆ ಮಾಡಿ ತನಿಖೆ ಮಾಡಿಸುತ್ತೇನೆ.

ಶ್ರೀ ಬಿ. ಎ. ಉಪ್ಪಿನ್.—ಹಾರಪಗೇರಿ, ಎಚ್. ಬಿ. ಹೂಗಾರ್, ವೀರಣ್ಣ ದೇಸಾಯಿ, ಬಸವರಾಜಸೇರಿ, ಶಾಮ ಆಂಟೋಲೆ, ಎ. ಜಿ. ಮುಧೋಳ ಹೀಗೆ ಅನೇಕ ಕಾರ್ಪೊರೇಟರ್ಸ್ ಹೆಸರು ಗಳು ನನ್ನ ಬಳಿ ಇವೆ. ಈ ಕಾರ್ಪೊರೇಟರ್ಸ್ ಹಾಗೂ ಇವರ ಸಂಬಂಧೀಕರು ಅಲ್ಲಿಯ ನಗರಪಾಲಿಕೆಗೆ ಸೇರಿದ ಖಾಲಿ ನಿವೇಶನಗಳನ್ನು ಕಡಿಮೆ ಬೆಲೆಗೆ ಪಡೆದಿದ್ದಾರೆ. ಈ ಖಾಲಿ ನಿವೇಶನಗಳನ್ನು ಹರಾಜು ಹಾಕಿದರೆ ಅಲ್ಲಿನ ಮಹಾನಗರಪಾಲಿಕೆಗೆ ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಬರುತ್ತದೆ ಆದರೆ ಇವರುಗಳು ಕಡಿಮೆ ಬೆಲೆಗೆ ಪಡೆದು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ೨-೩ ತಿಂಗಳ ಹಿಂದೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನೌಕರರೊಬ್ಬರು ಸತ್ಯಾಗ್ರ ಅವರ ಜಾಗದಲ್ಲಿ ಅವರ ಮಗನಿಗೆ ಮಾನವೀಯತೆ ದೃಷ್ಟಿಯಿಂದ ಎರಡನೇ ದರ್ಜೆ ಗುಮಾಸ್ತರ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಾಗ ನಗರಪಾಲಿಕೆಯವರು ಕೆಲಸಕ್ಕೆ ತೆಗೆದುಕೊಂಡರೆ ಒಂದು ಸಾವಿರ ರೂಪಾಯಿಗಳ ಪಗಾರ ಕೊಡಲು ತಮ್ಮಲ್ಲಿ ಹಣ ಇಲ್ಲವೆಂದು ಹೇಳಿದರು. ಆದರೆ ಕೋಟ್ಯಾಂತರ ರೂಪಾಯಿ ಗಳಷ್ಟು ಬೆಲೆ ಬಾಳುವ ನಿವೇಶನಗಳ ಬಗ್ಗೆ ಈ ರೀತಿ ಅವ್ಯವಹಾರ ನಡೆದಿರುವುದು ಸರಿಯೇ ? ಈ ಬಗ್ಗೆ ಸಿ. ಓ. ಡಿ. ತನಿಖೆ ಆಗಬೇಕೆಂಬುದು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಸೇರಿದ ಜನತೆಯ ಅಭಿಪ್ರಾಯವಾಗಿದೆ. ಆದ್ದರಿಂದ ಇದಕ್ಕೆ ಮಾನ್ಯ ಮಂತ್ರಿಗಳು ಒಪ್ಪುತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್.—ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಅವರು ಇಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಇದು ಬಿಟ್ಟು ಬೇರೆ ಏನಾದರೂ ಇಲ್ಲಿ ನಡೆದಿದ್ದರೆ ತನಿಖೆ ಮಾಡಿಸುತ್ತೇನೆ.

ಶ್ರೀ ಬಿ. ಎ. ಉಪ್ಪಿನ್.—ಇದು ಕೇವಲ ಒಬ್ಬರ ಪ್ರಶ್ನೆಯಲ್ಲ. ಇದರಲ್ಲಿ ಜನತಾ ಪಕ್ಷದವರು ಇದ್ದಾರೆ, ಕಾಂಗ್ರೆಸ್ ಪಕ್ಷದವರು ಇದ್ದಾರೆ, ಬಿ ಜೆ. ಪಿ. ಪಕ್ಷದವರು ಇದ್ದಾರೆ. ಆದ್ದರಿಂದ ಈ ಬಗ್ಗೆ ಯೋಗ್ಯ ತನಿಖೆ ಆಗಲೇ ಬೇಕು. ಈ ಬಗ್ಗೆ ತಾವು ಸರಿಯಾದ ಉತ್ತರ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿದಂತೆ ತಾವು ಈ ಬಗ್ಗೆ ವಿವರವಾಗಿ ಬರದುಕೊಡಿ. ಅವರು ತನಿಖೆ ಮಾಡಿಸುತ್ತಾರೆ.

ಮನೆಗಳ ಹಂಚಿಕೆ ಬಗ್ಗೆ

೧೬೬೬. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬಿರಾದ್).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿರಾದ್ ಕ್ಷೇತ್ರದಲ್ಲಿ ಸರ್ಕಾರದಿಂದ ಆರ್ಥಿಕ ದುರ್ಬಲ ವರ್ಗದವರಿಗೆ ನೀಡಲಾದ ಮನೆಗಳ ಸಂಖ್ಯೆ ಎಷ್ಟು ?

ಆ) ಸದರಿ ಕ್ಷೇತ್ರದಲ್ಲಿ ಒಡ ಜನತೆಗೆ ನೀಡಲಾದ ಜನತಾ ಮನೆಗಳ ಸಂಖ್ಯೆ ಎಷ್ಟು ?

ಇ) ಕಡಿಮೆ ಬೆಲೆ ಹಾಗೂ ಜನತಾ ಮನೆ ಳಿಗಾಗಿ ಜಂಟ್ ಸೀಟನ್ನು (ಹೊದಿಸಲು) ಖರೀದಿಸಲು ಏರ್ಪಾಡು ಮಾಡಿದ ಹಣವೆಷ್ಟು ಹಾಗೂ ಯಾರಿಂದ ಅವನ್ನು ಖರೀದಿಸಲಾಗಿದೆ ?